ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆಃ ಪ್ರತಿವಾದಿ ಪರವಾಗಿ ಶ್ರೀ ವಿ.ಹೆಚ್.ಆರ್. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ದಿನಾಂಕಃ 05-04-2007 ರ ಶಫಥ ಪತ್ರವನ್ನು ನಿಡಿ-1 ಎಂದು (ವಾದಿ ಪರ ವಕೀಲರು ತಮ್ಮ ತಕರಾರು ಇದೆ ಎಂದು ತಿಳಿಸಿರುತ್ತಾರೆ), ದಿನಾಂಕಃ 10-12-2010 ರ ನಿವೇಶನದ ವರ್ಗಾವಣೆ ಪತ್ರವನ್ನು ನಿಡಿ-2 ಎಂದು, ಕಟ್ಟಡ ಅನುಮತಿ ಆದೇಶವನ್ನು ನಿಡಿ-3 ಎಂದು, ದಿನಾಂಕಃ 18-01-2016 ರ ಬ್ಯಾಂಕಿನಿಂದ ಪಟ್ಟಣ ಪಂಚಾಯತಿಗೆ ಕಳುಹಿಸಿದ ಪತ್ರವನ್ನು ನಿಡಿ-4 ಎಂದು, ಪಟ್ಟ ಪಂಚಾಯತ ಚಿಂಚೋಳಿರವರು ನೀಡಿದ ನಕಾಶೆಯನ್ನು ನಿಡಿ-5 ಎಂದು, ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶ ಪತ್ರವನ್ನು ನಿಡಿ-6 ಎಂದು, ಮೂರು ಭಾವಚಿತ್ರಗಳನ್ನು ನಿಡಿ-7 ರಿಂದ ನಿಡಿ-9 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ..

**ಪಾಟೀ ಸವಾಲು ವಾದಿ ಪರ ಶ್ರೀ ಜೆ.ಪಿ.ಎ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಚಿಂಚೋಳಿ